

ಕೃಷ್ಣಮೃಗದ ಠೀವಿಯ ನಡಿಗೆ



ಕ್ಯಾಮೆರಾಗೆ ಫೋಸು ಕೊಡುವಂತೆ ನಿಂತಿರುವ ಹೆಣ್ಣು ಕೃಷ್ಣಮೃಗಗಳು

ಚಟುವಟಿಕೆಯನ್ನು ಹೊಂದಿರುತ್ತದೆ.

**ಸಂರಕ್ಷಿತ ಅಭಯಾರಣ್ಯ:** ಮೈದನಹಳ್ಳಿ ಸಂರಕ್ಷಿತ ಅರಣ್ಯ ಪ್ರದೇಶವಾಗಿರುವುದರಿಂದ ಇಲ್ಲಿ ಎಚ್ಚರವೂ ಅಗತ್ಯ. ಸ್ವಂತ ವಾಹನದಲ್ಲಿ ಮಣ್ಣಿನ ರಸ್ತೆಯಲ್ಲಿ ಸಾಗುತ್ತಿರುವಾಗ ಕೃಷ್ಣಮೃಗಗಳು ದಾರಿಯಲ್ಲಿ ಛಂಗನೆ ಜಿಗಿದು ಮಾಯವಾಗುವ ಅಪರೂಪದ ದೃಶ್ಯಗಳನ್ನು ನೋಡಬಹುದು. ಈ ವನ್ಯಧಾಮಕ್ಕೆ ಪ್ರವೇಶಿಸಲು ಯಾವುದೇ ರೀತಿಯ ಪ್ರವೇಶ ಶುಲ್ಕವಿಲ್ಲ. ಆದರೆ ಪ್ರವಾಸಿಗರ ಸದ್ವರ್ತನೆಯನ್ನು ಅರಣ್ಯ ರಕ್ಷಕರು ನಿರೀಕ್ಷಿಸುತ್ತಾರೆ. ಎಲ್ಲದರ ಚಲನವಲನ, ದುರ್ವರ್ತನೆಗಳು ಇತ್ತೀಚೆಗೆ ಅಳವಡಿಸಿರುವ ಕ್ಯಾಮೆರಾ ಟ್ರ್ಯಾಪಿಂಗ್‌ನಲ್ಲಿ ಸೆರೆಯಾಗುತ್ತವೆ! ಪ್ರಕೃತಿ ಮಡಿಲಲ್ಲಿರುವ ಕೃಷ್ಣಮೃಗಗಳು, ಪಕ್ಷಿಸಂಕುಲಗಳನ್ನು ಉಳಿಸಬೇಕಿರುವುದು ನಮ್ಮ ಜವಾಬ್ದಾರಿಯಾಗಿರುವುದರಿಂದ ಅರಣ್ಯ ವೀಕ್ಷಣೆಗೆ ಹೋಗುವವರು ತಮ್ಮ ವಾಹನಗಳನ್ನು ಯದ್ವಾತದ್ವಾ ಚಲಾಯಿಸಿ ಕೃಷ್ಣಮೃಗಗಳನ್ನು ಗಾಬರಿಗೊಳಿಸದೇ ಶಾಂತ ರೀತಿಯಲ್ಲಿ ವರ್ತಿಸಿದರೆ, ಕ್ಯಾಮೆರಾ ಕಣ್ಣಿಗೆ ಅತ್ಯುತ್ತಮ ಚಿತ್ರಗಳು ಸೆರೆಯಾಗುತ್ತವೆ.

ಆದರೆ ಈ ಸುಂದರ ಪರಿಸರವನ್ನು ಕಲುಷಿತಗೊಳಿಸುವ ಯತ್ನಗಳು ನಡೆದೇ ಇವೆ. ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಈ ಮೈದನಹಳ್ಳಿ ಕೃಷ್ಣಮೃಗ ಸಂರಕ್ಷಣಾಧಾಮದಲ್ಲಿ ಕಸ ವಿಲೇವಾರಿ ಘಟಕವನ್ನು ಸ್ಥಾಪಿಸಲು ಹೊರಟಿರುವುದು ಜನರ ವಿರೋಧಕ್ಕೆ ಕಾರಣವಾಗಿದೆ. ಕೃಷ್ಣಮೃಗದಂತಹ ಅಪರೂಪದ ಹಾಗೂ ಇನ್ನಿತರ ಮುಗ್ಧ ಪ್ರಾಣಿ ಪಕ್ಷಿಗಳ ಉಳಿವಿಗಾಗಿಯಾದರೂ ಕಸ ವಿಲೇವಾರಿ ಘಟಕದ ಸ್ಥಾಪನೆಯ ಬಗ್ಗೆ ಸರ್ಕಾರ ಮತ್ತೊಮ್ಮೆ ಚಿಂತನೆ ನಡೆಸುವುದು ಸೂಕ್ತವಾಗಿದೆ.

**ಜಯಮಂಗಲಿ ಅಭಯಾರಣ್ಯಕ್ಕೆ ತಲಪುವ ಮಾರ್ಗ:** ಬೆಂಗಳೂರಿನಿಂದ ಬರುವುದಾದರೆ ದಾಬಸ್‌ಪೇಟೆಯಿಂದ ಬಲಕ್ಕೆ ಕೊರಟಗೆರೆ ಮಾರ್ಗವಾಗಿ ಬಂದು ಮಧುಗಿರಿಯಿಂದ ಕೊಡಿಗೇನಹಳ್ಳಿ ಮಾರ್ಗವಾಗಿ ಮೈದನಹಳ್ಳಿ ತಲುಪಬಹುದು. ಬೆಂಗಳೂರಿನಿಂದ ಸುಮಾರು 130 ಕಿ.ಮೀ ದೂರ. ತುಮಕೂರು ಜಿಲ್ಲಾ ಕೇಂದ್ರದಿಂದ ಕೊರಟಗೆರೆ– ಮಧುಗಿರಿ– ಕೊಡಿಗೇನಹಳ್ಳಿ ಮಾರ್ಗದಲ್ಲಿ ಸುಮಾರು 80. ಕಿ.ಮೀ ಪಯಣಿಸಿದರೆ ಮೈದನಹಳ್ಳಿ ತಲುಪಹುದು. ಊಟ, ವಸತಿ ವ್ಯವಸ್ಥೆಯನ್ನು ಸ್ವಂತ ಮಾಡಿಕೊಳ್ಳುವುದು ಉತ್ತಮ. ಸಮೀಪದ ಮಧುಗಿರಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಬಹುದು.